


### ಡಬ್ಬಿಂಗ್ ನಮಗೆ ಬೇಡ

ಡಬ್ಬಿಂಗ್ ಮೂಲಕ ಭಾಷೆಯನ್ನು ಬದಲಿಸಬಹುದು. ಆದರೆ ಪರಿಸರ ಹೇಗೆ ನಮ್ಮದಾಗುತ್ತದೆ. ಸಾಹಿತ್ಯದಲ್ಲಿ ಅನುವಾದ ಒಂದು ಕಲೆ, ಆದರೆ ಸಿನಿಮಾದಲ್ಲಿ ಅಲ್ಲ ಎಂಬ ಮುಖಪುಟ ಲೇಖನದ ಚ.ಹ.ರಘುನಾಥ ಅವರ ಅಭಿಪ್ರಾಯ ಸರಿ ಇದೆ. ಸಾವಿರಾರು ಕಲಾವಿದರನ್ನು ಬೀದಿಗೆ ತಳ್ಳುವ ಡಬ್ಬಿಂಗ್ ನಮಗೆ ಬೇಡವೇ ಬೇಡ. ಅಂತರ್ಜಾಲದಲ್ಲಿ ಕನ್ನಡೀಕರಣದ ಬಗ್ಗೆ ಮಾತನಾಡದವರು ಸಿನಿಮಾ ಡಬ್ಬಿಂಗ್ ಬಗ್ಗೆ ಮಾತ್ರ ಯಾಕೆ ಒತ್ತಾಯಿಸುತ್ತಿದ್ದಾರೆ? ಅನಕೃ, ರಾಜಕುಮಾರ್, ವಾಟಾಳ್ ನಾಗರಾಜ್, ಎಸ್.ಎಲ್.ಭೈರಪ್ಪ ಅವರ ಆಶಯ ನಾವು ಮರೆತರೆ ಹೇಗೆ?

–ಕೊಹಿಮ, ಬಸರಕೋಡು/ ಕಾಡನೂರು ರಾಮಶೇಷ, ಹುಲಿಮಂಗಲ/ ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಎಚ್.ಆನಂದಕುಮಾರ್, ಚಿತ್ರದುರ್ಗ /ಬಿ.ಎಸ್. ನಾರಾಯಣ ಸ್ವಾಮಿ, ಬೋಧನ ಹೊಸಹಳ್ಳಿ

### ಅಡ್ಡಗೋಡೆ ಮೇಲೆ ದೀಪ ಏಕೆ?

ಡಬ್ಬಿಂಗ್ ವಿರೋಧಿ ಕನ್ನಡ ಚಳವಳಿಯನ್ನು ಪತ್ರಿಕೆಗಳು ಹಾಗೂ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಬೆಂಬಲಿಸಿದ್ದವು. ಪತ್ರಿಕೆಗಳು ಇಂದು ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ವರ್ತಿಸಿದರೆ, ಚಲನಚಿತ್ರ ವಾಣಿಜ್ಯ ಮಂಡಳಿ ತನ್ನ ನಿಲುವನ್ನು ಸ್ಪಷ್ಟಪಡಿಸದೇ ಇರುವುದು ವಿಪರ್ಯಾಸ.

–ಸಿ.ಎ.ರಮೇಶ್, ಕೋಲಾರ

### ಬೇಂದ್ರೆ ಪ್ರಶಸ್ತಿಗೆ ಕೃತಿ ಆಹ್ವಾನ

ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ 'ಬೇಂದ್ರೆ ಗ್ರಂಥ ಬಹುಮಾನ'ಕ್ಕೆ ಕಾವ್ಯ, ಕತೆ, ನಾಟಕ, ಕಾದಂಬರಿ, ಜೀವನ ಚರಿತ್ರೆ, ಲಲಿತ ಪ್ರಬಂಧ, ವಿಮರ್ಶೆ ಹಾಗೂ ಅನುವಾದ– ಈ ಪ್ರಕಾರದ ಪುಸ್ತಕಗಳನ್ನು ಆಹ್ವಾನಿಸಿದೆ. 2011ರಲ್ಲಿ ತಮ್ಮ ಪುಸ್ತಕವನ್ನು ಪ್ರಕಟಿಸಿದ, 1971ರ ನಂತರದಲ್ಲಿ ಜನಿಸಿದ ಲೇಖಕರು ಪುಸ್ತಕ ಬಹುಮಾನಕ್ಕೆ ಕೃತಿಯ 4 ಪ್ರತಿಗಳನ್ನು, ಜನ್ಮದಾಖಲೆಯೊಂದಿಗೆ ಜೂ.30ರ ಒಳಗೆ 'ಅಧ್ಯಕ್ಷರು, ಬೇಂದ್ರೆ ಗ್ರಂಥ ಬಹುಮಾನ ಸಮಿತಿ, ಬೇಂದ್ರೆ ಭವನ, ಸಾಧನಕೇರಿ, ಧಾರವಾಡ–580008' ಈ ವಿಳಾಸಕ್ಕೆ ಕಳಿಸಬೇಕೆಂದು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ. ಫೊ: 0836–2435327.

### ಆತ್ಮಾವಲೋಕನ ಅಗತ್ಯ

ಡಬ್ಬಿಂಗ್ ಇದ್ದರೂ ತೆಲುಗು, ತಮಿಳು ಚಿತ್ರಗಳು ಯಶಸ್ವಿಯಾಗಿ ನಡೆದಿವೆ. ಕನ್ನಡ ಚಿತ್ರರಂಗದವರು ಗುಣಮಟ್ಟದ ಚಿತ್ರ ತಯಾರಿಸುವತ್ತ ಆತ್ಮಾವಲೋಕನ ಮಾಡಿಕೊಳ್ಳಲಿ.

–ಪ್ರಸನ್ನ ರಾವ್, ಮಂಗಳೂರು/ ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

### ಚಿತ್ರ ನನ್ನದಲ್ಲ

ಮೇ 10 'ಸುಧಾ' ಸಂಚಿಕೆಯಲ್ಲಿ ನನ್ನ 'ಹರ್ಸ್ಟ್ ಕ್ಯಾಸಲ್' ಎಂಬ ಲೇಖನ ಪ್ರಕಟವಾಗಿದ್ದು, ಅದರಲ್ಲಿರುವ ಕೊನೆಯ ಚಿತ್ರ (ದೋಣಿ ವಿಹಾರದಲ್ಲಿ ಲೇಖಕಿ) ನನ್ನದಲ್ಲ.

–ಸರಸ್ವತಿ ಶಂಕರ್, ಬೆಂಗಳೂರು

ಹೌದು, ಚಿತ್ರ ತಪ್ಪಾಗಿದೆ.

–ಸಂ.

### ಉತ್ತಮ ಹಾಸ್ಯ ಲೇಖನ

ಮಂಜುಳಾರಾಜ್‌ರ 'ಚೌಕಾಶಿ' ಹಾಸ್ಯ ಚಟಾಕಿ ಚೆನ್ನಾಗಿ ಮೂಡಿಬಂದಿದೆ. ಪ್ರಬಂಧ, ಕಥೆಗಳನ್ನು ಹೆಚ್ಚು ಪ್ರಕಟಿಸಿರಿ.

–ಶೋಭಾ ಚೆಲ್ಲಾಪುರ, ಗುಲ್ಬರ್ಗಾ/ ಎಚ್.ಎಸ್.ವಿಶ್ವನಾಥ್, ಶಿವಮೊಗ್ಗ ಗುರುಮೂರ್ತಿ ಇಂದ್ರಾಳಿ, ಉಡುಪಿ

### ಅನ್ಯಧರ್ಮೀಯರಿಗೆ ದಕ್ಕೆ ಹೇಗೆ?

ಡಿ.ವಿ.ಜಿ.ಯವರ 'ಮಂಕು ತಿಮ್ಮನ ಕಗ್ಗ'ದ ಬಗ್ಗೆ ಮೇ.10ರ 'ಸಮುದ್ರ ಮಥನ'ದಲ್ಲಿ ರೆಮಿತ್ ಸಿಕ್ವೇರಾ ವ್ಯಕ್ತಪಡಿಸಿರುವ ಅಭಿಪ್ರಾಯ ಸರಿಯಲ್ಲ. ಡಿ.ವಿ.ಜಿ.ಯವರ ಕಗ್ಗದಲ್ಲಿ ಜೀವನ ದರ್ಶನವಿದೆ. ಬದುಕಿನ ಸಾರ–ಸಂದೇಶಗಳಿವೆ. ಕಾಲ–ದೇಶ–ಧರ್ಮಗಳನ್ನು ಮೀರಿ ಇಡೀ ಮನುಕುಲವನ್ನೇ ಪ್ರತಿನಿಧಿಸುವ ಈ ಅಮೂಲ್ಯ ಕೃತಿಯನ್ನು ಧರ್ಮಗ್ರಂಥವೆಂದು ನೇ.ಗೋ.ಭ. ಹೇಳಿದುದರಲ್ಲಿ ತಪ್ಪೇನು ಇಲ್ಲ. ಅವರು ಎಲ್ಲ ಧರ್ಮಗ್ರಂಥಗಳಿಗಿಂತ ಇದು ಶ್ರೇಷ್ಠ ಎಂದು ಸ್ವಲ್ಪ ಅತಿಶಯದಿಂದ ಹೇಳಿದ್ದಾರೆ. ಇದರಿಂದ ಅಲ್ಪಸಂಖ್ಯಾತ ಧರ್ಮೀಯರ ಭಾವನೆಗೆ ಅದ್ಹೇಗೆ ಧಕ್ಕೆ ಬರುತ್ತೋ... ನಾವು ಕಾಣೆವು...!

–ಸರಸ ಬಿ. ಕೃಷ್ಣ, ಕಮ್ಮರಡಿ/ ರುದ್ರೇಶ್ ಬಿ.ಅದರಂಗಿ, ಕೋಲಾರ

---

## ಮಕ್ಕಳ ಅರೋಗ್ಯ ಕೆಡಿಸುವ ಟಿ.ವಿ..

ಹದಿಹರೆಯದ ಮಕ್ಕಳು ಟಿ.ವಿಯನ್ನು ವೀಕ್ಷಿಸುವುದು ಹೆಚ್ಚಾದಂತೆ, ಅಪೌಷ್ಟಿಕ ಆಹಾರ ಸೇವನೆಯೂ ಅವರಲ್ಲಿ ಹೆಚ್ಚಾಗುತ್ತದೆ ಎಂದು ನೂತನ ಅಧ್ಯಯನವೊಂದು ಸ್ಪಷ್ಟಪಡಿಸಿದೆ.

ಅಮೆರಿಕಾದ ರಾಷ್ಟ್ರೀಯ ಮಕ್ಕಳ ಆರೋಗ್ಯ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಸಂಶೋಧಕರು 'ಮಕ್ಕಳ ಆಹಾರ ಪದ್ಧತಿಯಲ್ಲಿ ಟಿ.ವಿ ಮಾಧ್ಯಮದ ಪಾತ್ರ' ಎಂಬ ವಿಷಯವನ್ನು ಆಧರಿಸಿ ಅಧ್ಯಯನ ನಡೆಸಿದ್ದರು. ಸುಮಾರು ಹದಿಮೂರು ಸಾವಿರ ಮಕ್ಕಳನ್ನು ಸಂದರ್ಶಿಸಿ ಅವರು ಸಮೀಕ್ಷಾ ವರದಿಯನ್ನು ತಯಾರಿಸಿದ್ದಾರೆ.

ಅಧ್ಯಯನದ ಅವಧಿಯಲ್ಲಿ ಅವರಿಗೆ ಗೋಚರಿಸಿದ ಸಂಗತಿಯೇನೆಂದರೆ, ಟಿ.ವಿಯನ್ನು ಹೆಚ್ಚು ನೋಡುತ್ತಿದ್ದ ಮಕ್ಕಳು ಬಾಟಲಿಗಳಲ್ಲಿ ಸಂಗ್ರಹಿಸಿ ಇಡಲಾದ ತಂಪುಪಾನೀಯ– ಕುರುಕಲು ತಿಂಡಿಯಲ್ಲಿಯೇ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಇಂತಹ ಸತ್ವರಹಿತ ಆಹಾರಕ್ಕೆ ಅಂಟಿಕೊಂಡಿರುವ ಇವರಿಗೆ ಹಣ್ಣು– ಹಂಪಲು, ತರಕಾರಿಗಳೆಂದರೆ ಆಗದು ಎಂದು ಸಂಶೋಧಕರು ಹೇಳಿದ್ದಾರೆ.

ಹೆಚ್ಚು ಟಿ.ವಿ ವೀಕ್ಷಣೆ ಮಕ್ಕಳ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಸಮತೋಲನ ಆಹಾರದಿಂದ ದೂರವಾಗುವ ಅವರು ದೇಹದ ತೂಕವನ್ನೂ ಕಳೆದುಕೊಳ್ಳುತ್ತಾರೆ. ವಯಸ್ಸಿಗೆ ತಕ್ಕಂತೆ ದೇಹದ ಬೆಳವಣಿಗೆ ಆಗುವುದಿಲ್ಲ. ಆದ್ದರಿಂದ ಟೀವಿ ವೀಕ್ಷಣೆಯ ಸಮಯವನ್ನು ಕಡಿತ ಮಾಡುವುದು ಎಷ್ಟು ಮುಖ್ಯವೋ, ಅದಕ್ಕಿಂತ ಸತ್ವರಹಿತ ಕುರುಕಲು ತಿಂಡಿ ಮಕ್ಕಳಿಗೆ ಸಿಗದಂತೆ ನೋಡಿಕೊಳ್ಳುವುದು ಅತೀ ಮುಖ್ಯ ಎಂದು ಸಂಶೋಧಕರು ಸಲಹೆಯನ್ನು ನೀಡಿದ್ದಾರೆ.

## ಮನೋ ವಿಕಾಸಕ್ಕೆ ಸಂಗೀತ

ಹೆಲ್ತ್ ಪ್ಲಸ್



ಮಗು ತೊದಲುವ ಮುನ್ನವೇ ಸಂಗೀತದ ತರಬೇತಿ ನೀಡುವುದು ಅದರ ಬಹುಮುಖ ಕಲಿಕೆಗೆ ಬುನಾದಿಯಾಗುತ್ತದೆ ಎಂದು ಅಧ್ಯಯನವೊಂದು ಪ್ರತಿಪಾದಿಸಿದೆ.

ಹಸುಗೂಸಿಗೆ ಒಂದು ವರ್ಷ ತುಂಬುವ ಮುನ್ನ ಪೋಷಕರು ಸಂಗೀತದ ವಿವಿಧ ಪರಿಕರ ಅಥವಾ ರಾಗವನ್ನು ಪರಿಚಯಿಸಿ, ಆಗ ಮಕ್ಕಳಲ್ಲಿ ಪ್ರಕಟಗೊಳ್ಳುವ ಭಾವನೆಗಳಿಗೆ ಪೂರಕವಾಗಿ ಪ್ರತಿಕ್ರಿಯಿಸಿದರೆ ಅದು ಮಕ್ಕಳ ಮೆದುಳಿನ ವಿಕಾಸಕ್ಕೆ ಸಹಾಯ ಮಾಡುತ್ತದೆ.

ಈ ಮೊದಲು ಯುವಕರಲ್ಲಿ ಸಂಗೀತದ ಪ್ರಭಾವಕ್ಕೆ ಸಂಬಂಧಿಸಿದಂತೆ ಜರ್ಮನಿ ಪ್ರತಿಷ್ಠಾನ ಅಧ್ಯಯನ ನಡೆಸಿತ್ತು. ಇದೇ ಮೊದಲ ಬಾರಿಗೆ ಆರು ತಿಂಗಳ ನಂತರದ ಶಿಶುಗಳ ಮೇಲೆ ಸಂಗೀತದ ಪ್ರಭಾವಕ್ಕೆ ಸಂಬಧಿಸಿದಂತೆ ಅಧ್ಯಯನ ಮಾಡಲಾಗಿದೆ ಎಂದು ಸಂಶೋಧಕರು ಹೇಳಿದ್ದಾರೆ.

ವಾರದಲ್ಲಿ ಒಂದೆರಡು ದಿನ ಎಳೆಯ ಮಕ್ಕಳಿಗೆ ಪ್ರಾಸಬದ್ಧ ಗೀತೆ, ಇಲ್ಲವೆ ಇಂಪಾದ ಕವಿತೆ ಅಥವಾ ಸಂಗೀತ ಪರಿಕರಗಳ ನಾದವನ್ನು ಕೇಳಿಸುತ್ತಾ ಅವರ ಎದುರು ಪೋಷಕರು ತಮ್ಮ ಪ್ರತಿಕ್ರಿಯನ್ನು ತೋರಿಸಿದರೆ ಅದು ಮಕ್ಕಳ ಮೆದುಳನ್ನು ವಿಕಾಸ ಮಾಡುತ್ತದೆ ಎನ್ನುವುದು ಸಂಶೋಧನಾ ತಂಡದ ವಾದ.

ಸಂಗೀತ ಪರಿಚಯಿಸುವ ಮುನ್ನ ಮಕ್ಕಳಲ್ಲಿ ಇದ್ದ ಸಂವಹನ ಸಾಮರ್ಥ್ಯ ಹಾಗೂ ಸಾಮಾಜಿಕ ಸಂಬಂಧದ ಬೆಳವಣಿಗೆ ಸಂಗೀತ ಆಲಿಕೆಯ ನಂತರ ಗೋಚರಿಸಿದೆ ಎಂಬ ಅಂಶವನ್ನು ಅವರು ದಾಖಲಿಸಿದ್ದಾರೆ.

–ಟಿಪ್ಸ್